# 19

# “ಅವರೆಲ್ಲರೂ ಅತ್ಯಾಶ್ಚರ್ಯಪಟ್ಟರು, ಮತ್ತು ದೇವರನ್ನು ಮಹಿಮೆ ಪಡಿಸಿದರು”

## ಕ್ರಿಸ್ತನ ವಾಸಿಮಾಡುವಿಕೆಯ ಸೇವೆ, ಒಂದು ನಿಕಟ ನೋಟ

ವಾರಕ್ಕೋಸ್ಕರದ ನಮ್ಮ ಓದುವಿಕೆಯು ಯೇಸುವಿನ ಸೇವೆಯ ಮಹತ್ವದ ಭಾಗವು ಆತನು ಮಾಡಿದಂತಹ ಸ್ವಸ್ಥತೆಯೇ ಆಗಿತ್ತು ಎಂದು ಸೂಚಿಸುವುದಾಗಿದೆ.[1] ಉದಾಹರಣೆಗೆ, ಕಪೆರ್ನೌಮಿನ ಸಭಾಮಂದಿರದಲ್ಲಿ, ಯೇಸು ಒಬ್ಬ ಮನುಷ್ಯನಿಂದ ಅಶುದ್ಧ ಆತ್ಮವನ್ನು ಹೊರಗೆ ಹಾಕಿದನು (ಮಾರ್ಕ 1:21-28; ಲೂಕ 4:31-37). ಇದರ ಪರಿಣಾಮವಾಗಿ ಜನರು “ಎಲ್ಲರೂ ಅತ್ಯಾಶ್ಚರ್ಯಪಟ್ಟರು ... ಕೂಡಲೇ ಆತನ ಸುದ್ದಿಯು ಗಲಿಲಾಯ ಸೀಮೆಯಲ್ಲಿ ಎಲ್ಲೆಲ್ಲಿಯೂ ಹಬ್ಬಿತು” (ಮಾರ್ಕ 1:27, 28).

ಯೇಸು ಮತ್ತವನ ಶಿಷ್ಯರು ಸಭಾಮಂದಿರದಿಂದ ಪೇತ್ರ ಆಂದ್ರೇಯನ ಮನೆಗೆ ಹೋದರು. ಅಲ್ಲಿ ಯೇಸು ಪೇತ್ರನ ಅತ್ತೆಯನ್ನು ವಾಸಿಮಾಡಿದನು. ಆ ಸಂಜೆಯಲ್ಲಿ “ಅವರು ದೆವ್ವಹಿಡಿದ ಬಹಳ ಜನರನ್ನು ಬಳಿಗೆ ತಂದರು ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೇ ಮೈಯಲ್ಲಿ ನೆಟ್ಟಗಿಲ್ಲದವರನ್ನು ವಾಸಿಮಾಡಿದನು” (ಮತ್ತಾಯ 8:16; ಓದಿರಿ ವಚನಗಳು 14:17; ಮಾರ್ಕ 1:29-34; ಲೂಕ 4:38-41).

ಮರುದಿನ ಬೆಳ್ಳಿಗ್ಗೆ ಯೇಸು ಆ ಪ್ರಾಂತದೆಲ್ಲಡೆ ಬೋಧನಾ ಯಾತ್ರೆಯನ್ನು ಪ್ರಾರಂಭಿಸಿದನು (ಮತ್ತಾಯ 4:23-25; ಮಾರ್ಕ 1:35-39; ಲೂಕ 4:42-44).

> ಬಳಿಕ ಯೇಸು ಗಲಿಲಾಯದೆಲ್ಲಲ್ಲಾ, ತಿರುಗಾಡಿ ಅಲ್ಲಿಯವರ ಸಭಾಮಂದಿರಗಳಲ್ಲಿ ಉಪದೇಶಮಾಡುತ್ತಾ ಪರಲೋಕ ರಾಜ್ಯದ ಸುವಾರ್ತೆ ಯನ್ನು ಸಾರಿ ಹೇಳುತ್ತಾ ಜನರ ಎಲ್ಲಾ ತರದ ರೋಗಗಳನ್ನು ಎಲ್ಲಾ ತರದ ಬೇನೆ ಗಳನ್ನೂ ವಾಸಿಮಾಡುತ್ತಾ ಬಂದನು. ಆತನ ಸುದ್ದಿಯು ಸಿರಿಯ ದೇಶದಲ್ಲೆಲ್ಲಾ ಹಬ್ಬಿದ್ದರಿಂದ ಮೈನೆಟ್ಟಗಿಲ್ಲದವರನ್ನೂ ಅಂದರೆ ತರತರದ ರೋಗಭಾದೆಗಳಿಂದ ಕಷ್ಟಪಡುವವರನ್ನೂ ದೆವ್ವಹಿಡಿದವರನ್ನೂ ಮೂರ್ಚೆರೋಗಿಗಳನ್ನೂ ಪಾರ್ಶ್ವವಾಯುವಿನವರನ್ನೂ ಆತನ ಬಳಿಗೆ ಕರೆತಂದರು; ಆತನು ಅವರನ್ನು ಸ್ವಸ್ಥಮಾಡಿದನು. ಮತ್ತು ಗಲಿಲಾಯ ದೆಕೊಪೊಲಿಯ ಯೆರೂಸಲೇಮು ಯುದಾಯ ಎಂಬ ಸ್ಥಳಗಳಿಂದ ಹಾಗೂ ಯೋರ್ದನ್ನಿನ ಆಚೆಕಡೆಯಿಂದ ಜನರು ಗುಂಪುಗುಂಪಾಗಿ ಆತನ ಹಿಂದೆ ಹೋದರು (ಮತ್ತಾಯ 4:23-25).

ಈ ಬೋಧನಾ ಯಾತ್ರೆಯಲ್ಲಿ ಮಾಡಲ್ಪಟ್ಟ ಒಂದು ಅದ್ಭುತಕಾರ್ಯವು ವಿವರವಾಗಿ ದಾಖಲಿತವಾಗಿದೆ ಅದು ಕುಷ್ಟರೋಗಿಯನ್ನು ವಾಸಿಮಾಡಿದ್ದು (ಮತ್ತಾಯ 8:2-4; ಮಾರ್ಕ 1:40-45; ಲೂಕ 5:12-16). ಯೇಸು ಆ ಕುಷ್ಟ ರೋಗಿಗೆ ಯಾರಿಗೂ ಹೇಳ ಬಾರದು ಎಂದು ಹೇಳಿದ್ದನು, ಆದರೂ ಆತನು ಎಲ್ಲರಿಗೂ ತಿಳಿಸಿದ್ದನು. ಯೇಸು ಎಷ್ಟು ಜನಪ್ರಿಯನಾದನೆಂದರೆ “ಯೇಸು ಬಹಿರಂಗವಾಗಿ ಇನ್ನು ಯಾವ ಊರೊಳಕ್ಕೂ ಹೋಗಲಾರದೆ ಹೊರಗೆ ... ಇದ್ದನು ಆತನು ಎಲ್ಲಿಗೆ ಹೋಗುತ್ತಾನೋ ಅಲ್ಲಿಗೆ ಆತನ ಹಿಂದೆ ಬರುತ್ತಿದ್ದರು ಮತ್ತು ಜನರು ನಾಲ್ಕು ಕಡೆಯಿಂದಲೂ ಆತನ ಬಳಿಗೆ ಬರುತ್ತಿದ್ದರು” (ಮಾರ್ಕ 1:45).

ಯೇಸು ಕಪೆರ್ನೌಮಿಗೆ ಹಿಂತುರಿಗಿದನು - ಬಹುಶಃ ವಿಶ್ರಾಂತಿಗೆಂದು ಆದರೆ ಆತನು ಇರುವ ಮನೆಯಲ್ಲಿ ಪ್ರತಿಯೊಬ್ಬರೂ ತುಂಬಿಹೋಗಿದ್ದರಿಂದ ಅದು ಸಾಧ್ಯವಾಗದೆ ಹೋಯಿತು. ಇದು ಮಾಳಿಗೆಯನ್ನು ಬಿಚ್ಚಿ ಕೆಳಕ್ಕೆ ಇಳಿಸಿದ ಮನುಷ್ಯನನ್ನು ವಾಸಿ ಮಾಡುವುದಕ್ಕೆ ಇದೇ ಮಾರ್ಗವಾಯಿತು (ಮತ್ತಾಯ 9:2-8; ಮಾರ್ಕ 2:1-12; ಲೂಕ 5:17-26). ಯೇಸು ಆ ಮನುಷ್ಯನಿಗೆ "ಎದ್ದು ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ಮನೆಗೆ ಹೋಗೆಂದು ನಿನಗೆ ಹೇಳುತ್ತೇನೆ" (ಮಾರ್ಕ 2:11) ಎಂದು ಹೇಳಿದನು. ಮಾರ್ಕನ ಪ್ರಕಾರ ಆ ಮನುಷ್ಯನು ಎದ್ದು ಕೂಡಲೇ ತನ್ನ ಹಾಸಿಗೆಯನ್ನು ತೆಗೆದುಕೊಂಡು ಎಲ್ಲರ ಮುಂದೆ ಹೊರಟು ಹೋದನು. ಅದಕ್ಕೆ ಎಲ್ಲರು ಬೆರಗಾಗಿ "ನಾವು ಇಂಥದನ್ನು ಎಂದಿಗೂ ನೋಡಿದ್ದೇ ಇಲ್ಲವೆಂದು ಹೇಳುತ್ತಾ ದೇವರನ್ನು ಕೊಂಡಾಡಿದರು" (ವಚನ 12) KJVಯು ಅವರೆಲ್ಲರೂ ಅತ್ಯಾಶ್ಚರ್ಯಪಟ್ಟರು ಮತ್ತು ದೇವರನ್ನು ಕೊಂಡಾಡಿದರು ಎಂದು ಸಾಧಾರಣವಾಗಿ ಹೇಳಿಬಿಡುತ್ತದೆ. ನಮ್ಮ ಪಾಠದ ಶಿರ್ಷಿಕೆಯನ್ನು ಅದೇ ಪದಗಳಿಂದ ತೆಗೆದುಕೊಳ್ಳಲಾಗಿದೆ.

ಸುವಾರ್ತಾ ವಿವರಣೆಯ ಪ್ರಕಾರ ನಮ್ಮ ಓದುವಿಕೆಯನ್ನು ಮುಂದುವರೆಸುತ್ತಿದ್ದಂತೆ, ಯೇಸುವಿನ ಅದ್ಭುತಕಾರ್ಯಗಳ, ಅದ್ಭುತೀಯ ಸ್ವಸ್ಥಮಾಡುವಿಕೆಯ ಒಳಗೊಂಡ ಎಲ್ಲೇ ವುದರ ಬಗೆಗೆ ಓದುತ್ತೇವೆ. ಯೇಸುವಿನ ಅದ್ಭುತ ಕಾರ್ಯ ಮತ್ತು ವಿಶೇಷವಾಗಿ ಆತನ ರೋಗಿಗಳ ಸ್ವಸ್ಥಮಾಡುವಿಕೆಯ ಮಾತನಾಡುವುದರಲ್ಲಿ ಸಮಯ ಕಳೆಯುವುದು ಯೋಗ್ಯವಾದದ್ದು ಆಗಿದೆ.

## ಯೇಸುವಿನ ಅದ್ಭುತಗಳಲ್ಲಿನ *ತರ್ಕಬದ್ಧತೆ*

ಯೇಸು ನಿಜವಾಗಿಯೂ ಅದ್ಭುತಕಾರ್ಯಗಳನ್ನು ಮಾಡಿದನು ಎಂದು ನಾನು ಒತ್ತಿ ಹೇಳಬಯಸುತ್ತೇನೆ. ಅವುಗಳು ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನ ಇವುಗಳಲ್ಲಿ ದಾಖಲಾದಂತೆ ಸಂಭವಿಸಿವೆ.

ಯಾರು ಬೈಬಲ್‌ನ್ನು ಮತ್ತು ಯೇಸುವಿನ ದೈವತ್ವದಲ್ಲಿ ನಂಬಲು ಬಯಸುವುದಿಲ್ಲವೋ ಅವರು ಬೈಬಲ್ಲಿನಲ್ಲಿಯ ಅದ್ಭುತಕಾರ್ಯಗಳನ್ನು ತಮಾಷೆ ಮಾಡುವವರಾಗಿರುತ್ತಾರೆ. "ಮೀನು ನಿಜವಾಗಿಯೂ ಯೋನನನ್ನು ನುಂಗಿತೇ?" ಎಂದು ಅವರು ಕೇಳುತ್ತಾರೆ. "ಯೇಸು ಐದು ರೊಟ್ಟಿ ಎರಡು ಮೀನುಗಳಿಂದ ನಿಜವಾಗಿಯೂ ಐದುಸಾವಿರ ಜನರಿಗೆ ಊಟಮಾಡಿಸಿದನು" ಎಂದು ನೀನು ಯೋಚಿಸುತ್ತಿಯಾ? ಕ್ರೈಸ್ತರಾದಂತವರು ಅದ್ಭುತಕಾರ್ಯಗಳನ್ನು ಬಿಟ್ಟು ಹೊರಗಿರುವಂತದ್ದರ ಬಗ್ಗೆ ವಿವರಣೆ ನೀಡಲು ಅತೀ ದೀರ್ಘವಾದ ರೀತಿಯಲ್ಲಿ ಹೋಗುವವರಾಗಿದ್ದಾರೆ ಎಂದು ಯೋಚಿಸುವವರಾಗಿದ್ದು, "ಓಹ್ ನಾವಿದ್ದೇವೆ ಎಂಬ ಜ್ಞಾನವಿಲ್ಲದ ಕೇವಲ ಅಜ್ಞಾನಿಗಳಾದ ಜನರು ಹಿಂದಿರುಗಿದ್ದಾರೆ. ಅವರು ಅದ್ಭುತ ಕಾರ್ಯಗಳು ಎಂದು ಕರೆಯಿಸಿಕೊಳ್ಳುವ ಅದ್ಭುತ ಕಾರ್ಯಗಳು ನಿಜವಾದವುಗಳೇ." ಎಂದು ವೈಚಾರಿಕವಾದ ವಿವರಣೆಯನ್ನು ಕೊಡುವವರಾಗಿದ್ದಾರೆ.

ತಿರುಗಿ ನಾನು ಖಂಡಿತವಾಗಿ ಹೇಳುತ್ತೇನೆ, *ಯೇಸುವಿನ ಅದ್ಭುತ ಕಾರ್ಯಗಳು ಮತ್ತಾಯ, ಮಾರ್ಕ, ಲೂಕ, ಮತ್ತು ಯೋಹಾನನ ಸುವಾರ್ತೆಗಳಲ್ಲಿ ದಾಖಲಾದಂತೆ ನಿಜವಾಗಿಯೂ ಸಂಭವಿಸಿದವುಗಳು ಆಗಿವೆ.* ಈ ಹೇಳಿಕೆಯು ಸತ್ಯವಾದದ್ದು ಎಂದು ನಂಬಲು ಅಲ್ಲಿ ಅನೇಕ ಕಾರಣಗಳು ಇವೆ. ಅದರಲ್ಲಿ ಕೆಲವನ್ನು ನಾನು ಸೂಚಿಸುವವನಾಗಿದ್ದೇನೆ.

ನಾನು ದೇವರನ್ನು ನಂಬುವುದರಿಂದಾಗಿಯೇ ಇದು ನಿಜವಾದದ್ದು ಎಂದು ನಾನು ನಂಬುವವನಾಗಿದ್ದೇನೆ. ಒಬ್ಬನು ದೇವರನ್ನು ನಂಬಿದ್ದಾದರೆ "ದೇವರಿಗೆ ಅಸಾಧ್ಯವಲ್ಲ" ಎಂದೂ ನಂಬುವವನಾಗಿದ್ದಾನೆ (ಮಾರ್ಕ 10:27).

ಇದು ನಿಜವಾದುದು ಎಂದು ನಾನು ನಂಬುವವನಾಗಿದ್ದೇನೆ ಯಾಕೆಂದರೆ ನಾನು ಬೈಬಲ್‌ನ್ನು ನಂಬುವವನಾಗಿದ್ದೇನೆ. ಬೈಬಲ್ ದೇವರಿಂದ ಪ್ರೇರಿತವಾದುದ್ದು ಎಂಬುದನ್ನು

ನಂಬುದಕ್ಕೋಸ್ಕರ ನಮಗೆ ಒಳ್ಳೆಯ ಕಾರಣಗಳು ಇವೆ (2 ತಿಮೊಥ 3:16) ವರ್ಷದುದ್ದಕ್ಕೂ ಇದು ವಿಶ್ವಾಸಯೋಗ್ಯವಾದ ಪುಸ್ತಕವಾಗಿ ತೋಲಿಬಂದಿದ್ದು ನಮ್ಮ ಜೀವಿತಾವಧಿಯಲ್ಲಿ ಅಕ್ಷರಸಹ ನಂಬಿಕೆಯಿಡಬಹುದಾದ ಪುಸ್ತಕವಾಗಿದೆ. ದೇವರಿಂದ ಪ್ರೇರಿತವಾದ ಈ ಪುಸ್ತಕವು ಯೇಸುವಿನ ಅದ್ಭುತಕಾರ್ಯಗಳ ಬಗೆಗೆ ಹೇಳುವುದಾಗಿದೆ.

ನನ್ನ ಮುಂದಿನ ಕಾರಣವು ಈಗ ಸೂಚಿಸುವುದಕ್ಕೆ ಸಂಬಂಧಿತವಾಗಿದೆ: ಯೇಸುವಿನ ಅದ್ಭುತಕಾರ್ಯಗಳು, ಯೇಸು ತಾನು ದೇವರ ಕುಮಾರನು, ಮೆಸ್ಸೀಯನು, ಜಗತ್ತಿನ ಬೆಳಕು, ಜೀವದಾಯಕ ರೊಟ್ಟಿ ಪಾಪಗಳನ್ನು ಕ್ಷಮಿಸುವವನು ಎಂದು ಪ್ರತಿಪಾದಿಸಿದನು. ಇವುಗಳು ಅತಿಯಾದ ಪ್ರತಿಪಾದನೆಗಳೇ! ಇದರಂತೆ ಯಾರಾದರೂ ಪ್ರತಿಪಾದಿಸಿದ್ದಾದರೆ ಆತನು ತಾನು ಪ್ರತಿಪಾದಿಸುವ ಸತ್ಯವನ್ನು ಪ್ರಾಯೋಗಿಸುವವನೂ ಆಗಿರಬೇಕು ಅಥವಾ ಸುಳ್ಳುಗಾರನಾಗಿರಬೇಕು. ಯೇಸು ಸುಳ್ಳುಗಾರನಾಗಿರಬೇಕು ಅಥವಾ ಬುದ್ಧಿಹೀನನಾಗಿರಬೇಕು ಅಥವಾ ಕರ್ತನಾಗಿರಬೇಕು ಎಂದು ಕೆಲವರು ಹೇಳುತ್ತಾರೆ. ಇವೇ ಕೆಲ ಸಾಧ್ಯತೆಗಳು. ಒಬ್ಬನು ಯೇಸುವನ್ನು ಸುಳ್ಳುಗಾರ ಅಥವಾ ಬುದ್ಧಿಹೀನ ಎಂದು ಕರೆಯಲು ಇಷ್ಟವಿಲ್ಲದವನು ಆಗಿದ್ದಾದರೆ ಆತನು ದೇವರು ಮತ್ತು ಅದ್ಭುತಗಳನ್ನು ಮಾಡುವ ಆತನ ಸಾಮರ್ಥವು ಆತನ ಯೋಗ್ಯತೆಗೆ ಅರ್ಹವಾದದ್ದು ಆಗಿದೆ ಎಂದು ಗುರುತಿಸಲೇಬೇಕು.

ಇದು ಸತ್ಯವೆಂದು ನಾನು ನಂಬುತ್ತೇನೆ ಯಾಕೆಂದರೆ ಯೇಸು ಮತ್ತು ಆತನ ಪ್ರಭಾವವು ಆತನ ಅದ್ಭುತಕಾರ್ಯಗಳಿಂದ ಬೇರೆಯಾಗಿತ್ತು ಎಂಬುದಕ್ಕೆ ಅರ್ಥವಿಲ್ಲ. ನಾನು ACU[2]ದಲ್ಲಿ, ವಿದ್ಯಾರ್ಥಿಯಾಗಿದ್ದಾಗ, ಕೆಲ ದೈವಜ್ಞಾನಿಗಳು "ಐತಿಹಾಸಿಕ ಯೇಸುವಿನ ಹುಡುಕಾಟ" ಎಂಬಂಥಹದನ್ನು ನಡೆಸುತ್ತಿದ್ದರು. ಅವರಿಗೆ ಅದ್ಭುತಕಾರ್ಯಗಳಲ್ಲಿ ನಂಬಿಕೆ ಇರಲಿಲ್ಲ, "ಅದ್ಭುತ ಕಾರ್ಯಗಳು" ಮೂಢನಂಬಿಕೆಯ ಮೂರ್ಖತನವೇ ಎಂದು ಅವರ ಮನದಲ್ಲಿ ಇದ್ದುದರಿಂದ ಅವರು ಅದ್ಭತಕಾರ್ಯದ ಸಂಗತಿಯನ್ನು ಯೇಸುವಿನ ಕಥೆಯಿಂದ ತೆಗೆದುಹಾಕಿ ಭೂಮಿಯ ಮೇಲೆ ನಡೆದಾಡುವ "ನಿಜ ಯೇಸು"ವನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿದ್ದರು. ಅವರು ಜಗತ್ತಿನ ಅನಾಮಿಕ ಮೂಲೆಯಲ್ಲಿ ವಾಸಿಸುತ್ತಿದ್ದ ಯಾರಿಗೂ ತಿಳಿಯದ ಅನಕ್ಷರಸ್ಥನಾದ ನೈತಿಕ ತತ್ವಜ್ಞಾನಿಯ ಜೊತೆಗೆ ಅವರು ಅಂತ್ಯವಾದುರು. ಒಂದು ವೇಳೆ ಆ ಯೇಸು ಇತಿಹಾಸವನ್ನು ಬದಲಾಯಿಸುವುದಾದರೆ ಹೊಸ ಒಡಂಬಡಿಕೆಯಲ್ಲಿ ಯೇಸುವಿನ ಯಾವುದೇ ಗುಣಲಕ್ಷಣಕ್ಕಿಂತ ಶ್ರೇಷ್ಟ ಗುಣಲಕ್ಷಣವಾಗಬಹುದು ಎಂದು ಕೆಲವರು ಹೇಳಿದ್ದಾರೆ! ನನ್ನ ಶಿಕ್ಷಕರಲ್ಲಿ ಒಬ್ಬರಾದ ಜೆ. ಡಿ. ಥಾಮಸ್ ಈ ಜ್ಞಾನಿಗಳು ಪ್ರಯತ್ನವನ್ನು ಈರುಳ್ಳಿಯಿಂದ ಸಿಪ್ಪೆತೆಗೆದು ತಿರುಳನ್ನು ಹುಡುವುದಕ್ಕೆ ಎಂದು ಹೋಲಿಸಿದ್ದಾರೆ. ನೀನು ಸಿಪ್ಪೆಯನ್ನು ತೆಗೆಯುತ್ತಾ ಹೋದಂತೆ ಅಲ್ಲಿ ಏನೂ ಉಳಿಯದು. ನಿನಗೆ ಯೇಸುವನ್ನು ಮತ್ತು ಆತನ ಪ್ರಭಾವವನ್ನು ಆತನ ಅದ್ಭುತಕಾರ್ಯಗಳಿಂದ ಬೇರೆಯಾಗಿ ವಿವರಿಸಲು ಸಾಧ್ಯವೇ ಇಲ್ಲ.

ಸುವಾರ್ತೆಯಲ್ಲಿ ದಾಖಲೆಯಾದ ಹಾಗೆ ನಿಜವಾಗಿಯೂ ಸಂಭವಿಸಲ್ಪಟ್ಟವುಗಳು ಎಂದು ನಾನು ನಂಬುವವನಾಗಿದ್ದೇನೆ. ಯಾಕೆಂದರೆ ಆತನ ವೈರಿಗಳೂ ಕೂಡಾ, ಆತನು ಅದ್ಭುತ ಕಾರ್ಯಗಳನ್ನು ಮಾಡುತ್ತಿದ್ದನು ಎಂಬುದನ್ನು ನಿರಾಕರಿಸುತ್ತಿರಲಿಲ್ಲ. ಯೇಸು ಪಾರ್ಶ್ವವಾಯು ರೋಗಿಯನ್ನು ವಾಸಿಮಾಡಿದಂಥ ಈ ವಾರದ ಓದುವಿಕೆಯಲ್ಲಿ ಆತನ ಟೀಕಾಕಾರರು ಸಹ ಉಪಸ್ಥಿತವಿದ್ದರು. ಆದರೆ ಪಾಪಗಳನ್ನು ಕ್ಷಮಿಸಿಬಿಡುವುದಕ್ಕೆ ಮನುಷ್ಯಕುಮಾರನಿಗೆ ಭೂಲೋಕ ದಲ್ಲಿ ಅಧಿಕಾರ ಉಂಟೆಂದು ನಿಮಗೆ ತಿಳಿಯಬೇಕು ಎಂದು ಹೇಳಿ ಪಾರ್ಶ್ವವಾಯು ರೋಗಿಯನ್ನು ನೋಡಿ "ಎದ್ದು ನಿನ್ನ ಹಾಸಿಗೆಯನ್ನು ತೆಗೆದುಕೊಂಡು ಹೋಗೆಂದು ನಿನಗೆ ಹೇಳುತ್ತೇನೆ" (ಮಾರ್ಕ 2:10, 11) ಎಂದು ಬಹಿರಂಗವಾಗಿ ಅವರಿಗೆ ಸವಾಲನ್ನು ಎಸೆದನು. ಆ ಮನುಷ್ಯನು ಎದ್ದು ನಡೆದಾಡಿದ್ದನ್ನು ಆತನ ವಿಮರ್ಷಕರು ಅಲ್ಲಗಳೆಯಲಾರರು!

ಯೋಹಾನ 9ನ್ನು ನಾವು ತೆರೆದಾಗ, ಅಲ್ಲಿ ಹುಟ್ಟು ಕುರುಡನ ಸ್ವಸ್ಥತೆಯ ಬಗೆಗೆ

ಓದುತ್ತೇವೆ. ಯೇಸುವಿನ ವೈರಿಗಳು ಅದರ ಬಗೆಗೆ ಅಸಂತುಷ್ಟರಾಗಿದ್ದರು ಮತ್ತು ಯೇಸುವನ್ನು ಇಕ್ಕಟ್ಟಿಗೆ ಸಿಕ್ಕಿಸಲು ಪ್ರಯತ್ನಿಸುತ್ತಿದ್ದರು, ಆದರೆ ಒಂದಂತೂ ಅವರಿಂದ ಮಾಡಲಾಗಲಿಲ್ಲ; ಅಲ್ಲಿ ಅದ್ಭುತ ಕಾರ್ಯಗಳು ಸಂಬವಿಸಿದ್ದನ್ನು ಅವರಿಗೆ ಅಲ್ಲಗಳೆಯಲಾಗಲಿಲ್ಲ (ವಚನ 16).

ಯೋಹಾನ 11ರಲ್ಲಿ ಲಾಜರನನ್ನು ಎಬ್ಬಿಸಿದ್ದರ ಬಗೆಗೆ ನಾವು ಓದುತ್ತೇವೆ. ಯೇಸುವಿನ ವೈರಿಗಳು ಏನು ಹೇಳಿದರು ಎಂಬುದನ್ನು ಗಮನಿಸಿರಿ "ನಾವು ಮಾಡುವದು ಇದೇನು? ಈ ಮನುಷ್ಯನು ಬಹು ಸೂಚಕ ಕಾರ್ಯಗಳನ್ನು ಮಾಡುತ್ತಾನಲ್ಲಾ" (ವಚನ 47).

ಪಂಚಾಶತ್ತಮ ದಿನದಂದು ಪೇತ್ರನು ತನ್ನ ಜೊತೆ ಯೆಹೂದ್ಯರಿಗೆ ಬೋಧಿಸುವಾಗ "ನಜರೇತಿನ ಯೇಸು ಇದ್ದನಲ್ಲಾ, ದೇವರು *ನಿಮಗೂ ತಿಳಿದಿರುವಂತೆ* ಆತನ ಕೈಯಿಂದ ಮಹತ್ತುಗಳನ್ನು ಅದ್ಭುತಗಳನ್ನೂ ಸೂಚಕಕಾರ್ಯಗಳನ್ನೂ ನಿಮ್ಮಲ್ಲಿ ನಡಿಸಿ ಆತನನ್ನು ತನಗೆ ಮೆಚ್ಚಿಕೆಯಾದವನೆಂದು ತೋರಿಸಿಕೊಟ್ಟನು" (ಅಪೊಸ್ತಲರ ಕೃತ್ಯಗಳು 2:22; ಒತ್ತಿ ಹೇಳಿದ್ದು ನನ್ನದು) ಎಂದು ಹೇಳದನು. "ಆತನು ಹಾಗೆ ಮಾಡಲಿಲ್ಲ!" ಎಂದು ಯಾರೊಬ್ಬರೂ ಕೂಗಲಿಲ್ಲ ಹಾಗೂ ಆತನನನ್ನು ನಿಲ್ಲಿಸಲಿಲ್ಲ.

ಸತ್ಯವೇದದ ಸಮಯದಲ್ಲಿ ಜನರು ಯೇಸುವಿನ ಅದ್ಭುತಕಾರ್ಯಗಳನ್ನು ನಿರಾ ಕರಿಸಲಿಲ್ಲ ಎಂಬುದು ಮಾತ್ರ ಸತ್ಯವಾದದ್ದಲ್ಲ. ಕ್ರೈಸ್ತತ್ವದ ಆರಂಭದ ದಿನಗಳಲ್ಲಿ, ಕ್ರೈಸ್ತತ್ವವನ್ನು ನಾಶಮಾಡುವ ಪ್ರಯತ್ನದ ಪುಸ್ತಕವನ್ನು ಬರೆದಂತಹ ಜನರು ಎದ್ದರು. ಅವರಲ್ಲಿ ಸೆಲ್ಲೂಸ, ಹರ್ಕಿಲಸ್ ಮತ್ತು ಅಪೋಸ್ಟೇತನಾದ ಜೂಲಿಯನ್ ಸೇರಿದ್ದಾರೆ. ಯಾವುದೇ ಅಕ್ಷೇ ಪಣೆಯಿಲ್ಲದೆ, ಈ ಜನರು ಮಾಡದಂಥ ಒಂದು ಸಂಗತಿ ಎಂದರೆ ಯೇಸು ಮಾಡಿದಂಥ ಅದ್ಭುತಕಾರ್ಯಗಳನ್ನು ನಿರಾಕರಿಸುವದು ಆಗಿತ್ತು.

ಯೇಸುವಿನ ಅದ್ಭುತ ಕಾರ್ಯಗಳ ಅಧಿಕೃತವಾದವುಗಳು ಆಗಿದ್ದವು. ಯಾಕೆಂದರೆ ಇಂದಿಗೂ ಕೂಡಾ ಅವುಗಳ ಹೊರಗೆ ಅವನ್ನು ವಿವರಿಸಲು ಆಗಿದ್ದಾಗಿದೆ ಕ್ವಚಿತ್ತಾಗಿ ಕೆಲವರು ಹೀಗೆ ಹೇಳಬಹುದು. "ನಿಜ ಯೇಸು ಅದ್ಭುತ ಕಾರ್ಯಗಳನ್ನು ಮಾಡುತ್ತಾನೆಂದು ಅವರು ಯೋಚಿಸಿದ್ದರು, ಆದರೆ ಆತನ ಸುತ್ತಲಿನ ಜನುರು ಮಾಂತ್ರಿಕನಾದ ಸಿಮೋನನಂತ ಅದ್ಭುತ ಕಾರ್ಯಗಳನ್ನು ಮಾಡುತ್ತಾನೆ ಹಾಗೂ ಜನರು ತಾವು ಅದ್ಭುತ ಕಾರ್ಯದ ಕೆಲಸಗಾರರು ಎಂದು ಯೋಚಿಸುವವರಾಗಿದ್ದಾರೆ ಎಂದು ಆತನ ಬಗೆಗೆ ಪ್ರತಿಪಾದಿಸುತ್ತಾರೆ ಯೇಸು ಕೇವಲ ಜನರನ್ನು ಮೋಸ ಮಾಡುತ್ತಿದ್ದಾನೆ." ಆ ಸತ್ಯಾಂಶದಲ್ಲಿ ಯಾವುದೇ ಹುರುಳಿದ್ದರೆ ಆ ವಾದಕ್ಕೆ ಒಂದು ತೂಕವಿರುತ್ತಿತ್ತು; ಅವರಲ್ಲಿ ಪ್ರತಿಯೊಬ್ಬನೂ ಜನರನ್ನು ಮೋಸಗೊಳಿಸುವವನೂ, ಜನರನ್ನು ಹೇಗೆ ಮೂರ್ಖರನ್ನಾಗಿಸಬೇಕು ಎಂದು ತಿಳಿದವನೂ, ಮತ್ತು ಜನಜಂಗುಳಿಯ ಮನಸ್ಸನ್ನು ಹೇಗೆ ಬಳಿಸಬೇಕೆಂದು ಅರಿತವರೂ ಆಗಿದ್ದು ಯೇಸುವಿನ ಮತ್ತು ಅಪೊಸ್ತಲರ ಅದ್ಭುತ ಕಾರ್ಯಗಳ ಬಗ್ಗೆ ತಮ್ಮನ್ನು ತಾವೇ ಸಮಜಾಯಿಸಿಕೊಂಡರು. ಅಪೊಸ್ತಲರ ಕೃತ್ಯಗಳು 8ರಲ್ಲಿನ ಮಾಂತ್ರಿಕನಾದ ಸಿಮೋನನ ಕಥೆಯನ್ನು ಪರೀಕ್ಷಿಸುವಾ. ಅದರಂತೆಯೇ ಯೋದನ ಬಗೆಗೆ ಗಮನಿಸುವಾ. ಯೇಸು ಅಂತರ್ಯದಲ್ಲಿ ಮಾಡಿದ ಎಲ್ಲವುಗಳು ಬಗೆಗೆ ಯೂದನು ತಿಳಿದಿದ್ದನು. ಯೇಸು ಒಂದು ವೇಳೆ ಜನಜಂಗುಳಿಯನ್ನು ಮೋಸಗೊಳಿಸಿದ್ದಾ ದರೆ ಯೂದನಿಗೆ ನಿಶ್ಚಿತವಾಗಿ ತಿಳಿದಿರುತ್ತಿತ್ತು. ಯೇಸುವಿಗೆ ವೈರಿಗಳಿಗೆ ಆತನು ಹೇಳಲಿಲ್ಲ. ಆತನುಮಾಡಹುದಾದ ಎಲ್ಲವು ಎಂದರೆ ಯೇಸುವನ್ನು ಎಲ್ಲಿ ಕಂಡುಕೊಳ್ಳಬೇಕೆಂಬುದನ್ನು ಹೇಳುವದು ಅದರ ಮೂಲಕ ಅವರು ಆತನನ್ನು ಸೆರಹಿಡಿಯಬಹದಾಗಿತ್ತು.

ಕೆಲವರು ಹೀಗೆ ಪ್ರತಿಭಟಿಸಬಹುದು "ಸರಿ, ಈ ವಿವರಣೆಗಳು ವಿಶ್ವಾಸ ಯೋಗ್ಯವಾ ಗಿದ್ದರೂ ಕೂಡಾ, ಈ ಸಂತಿಗಳೂ ಸಂಭವಿಸಿದ್ದರೂ ಕೂಡಾ, ಅದರ ಬಗೆಗೆ ಬರೆದರು ಏನು ಸಂಭವಿಸುತ್ತದೆ ಎಂಬುದನ್ನೂ ಕೂಡಾ ಅವರಿಗೆ ತಿಳಿದಿರಲಿಲ್ಲ. ಮಾನಸಿಕ ಸ್ವಸ್ಥ ರೋಗದ ಜನರ ಬಗೆಗೆ ಅವರು ತಿಳಿದಿರಲಿಲ್ಲ. ಇದು ಶೇಕಡ 80ರಷ್ಟು ಜನರು ದೈಹಿಕ ಸಮಸ್ಯೆಯ ಜನರು ಮನಸ್ಸಿಗೆ ಸಂಬಂಧಿಸಿದ ಸಮಸ್ಯೆಯನ್ನು ಕೂಡಾ ಹೊಂದಿರುತ್ತಾರೆ ಎಂದು ನಾವು

ತಿಳಿದಿದ್ದೇವೆ. ಹೀಗಾಗಿ ಯೇಸುವೂ ಕೂಡಾ ಸ್ವಸ್ಥಮಾಡಲು ಸಮರ್ಥನಾದನು."

ಅನೇಕ ರೋಗಗಳು ಮನಸ್ಸಿಗೆ ಸಂಬಂಧಿಸಿದವುಗಳು ಆಗಿರುತ್ತವೆ ಎಂಬುದನ್ನು ನಾನು ಅಲ್ಲಗಳೆಯಲಾರೆನು, ಆದರೆ ಯೇಸುವಿನ ಅದ್ಭುತಕಾರ್ಯಗಳಲ್ಲಿ ಒಂದನ್ನು ವಿವರಿಸಲಾಗದು. ಕೈಕಾಲು ಮುರುಟ್ಟಿದವನ ಎದ್ದೇಳುವಿಕೆಯನ್ನು ಇದು ವಿವರಿಸಲಾರದು. ಈ ಮನುಷ್ಯನು *ಹುಟ್ಟುವಾಗ* ಕಣ್ಣನ್ನು ಹೊಂದಿದ್ದು ನಂತರ psychosomatic ರೋಗದ ಬೆಳೆಯುವಿಕೆಯಿಂದ ಕುರುಡನಾಗಿರಲಿಕ್ಕಿಲ್ಲ. ಆತನು ಹುಟ್ಟು ಕುರುಡನಾಗಿದ್ದನು. ಲಾಜರನು ಸತ್ತು ಆಗಲೇ ಮೂರು ದಿನಗಳು ಆಗಿಹೋಗಿದ್ದ ಮತ್ತು ಆತನು ಆಗಲೇ ಕೊಳೆಯುವ ಸ್ಥಿತಿಗೆ ಬಂದಿದ್ದ ಲಾಜರನನ್ನು ಯೇಸು ಎಬ್ಬಿಸಿದ ಬಗೆಗೆ ಏನನ್ನುತ್ತಿ? (ಯೋಹಾನ 11). ಲಾಜರು ತಾನು ಸತ್ತು ಮೂರು ದಿನಗಳಾಗಿವೆ ಎಂದು *ಕೇವಲ* ಯೋಚಿಸಿದ್ದನಾ?

ಯೇಸುವಿನ ಅನೇಕ ಅದ್ಭುತ ಕಾರ್ಯಗಳು ಸಾರ್ವಜನಿಕವಾಗಿ ಮಾಡಲ್ಪಟ್ಟವು. ಅವುಗಳು ಅವಿಶ್ವಾಸಿಗಳ ಮುಂದೆ ಮಾಡಲ್ಪಟ್ಟವೆ. ಅವುಗಳು ಸಮಯದ ಉದ್ದನೆಯ ಅವಧಿಯ ಮೇಲೆ ಮತ್ತು ಹೆಚ್ಚಿನ ವಿಧಗಳನ್ನು ಒಳಗೊಂಡ ಶಕ್ತಿಯ ಪ್ರಾಯೋಗಿಕತೆಯಲ್ಲಿ ಅವು ಮಾಡಲ್ಪಟ್ಟವು. ನಿಸರ್ಗದ ಮೇಲಿನ ಶಕ್ತಿ, ರೋಗದ ಮೇಲಿನ ಶಕ್ತಿ, ದೆವ್ವದ ಮೇಲಿನ ಶಕ್ತಿ, ಅಲೌಕಿಕ ಶಕ್ತಿಯನ್ನು ಒಳಗೊಂಡ ಜ್ಞಾನ, ಸೃಷ್ಟಿಸುವಿಕೆಯನ್ನು ಒಳಗೊಂಡ ಶಕ್ತಿ, ಮತ್ತು ಮರಣದ ಮೇಲಿನ ಶಕ್ತಿ. ಅದರ ಹೊರತಾಗಿ ವಿವರಿಸುವದಕ್ಕೆ ಬೇರೆ ಮಾರ್ಗವೇ ಇಲ್ಲ.

ಯೇಸು ನಿಜವಾಗಿಯೂ ಮಾಡಿದ್ದು ...

... ಕಪೆರ್ನೌಮಿನ ಸಭಾಮಂದಿರದಲ್ಲಿ ಪಾರ್ಶ್ವವಾಯು ರೋಗಿಯನ್ನು ವಾಸಿ ಮಾಡಿದ್ದು!

... ಪೇತ್ರನ ಅತ್ತೆಯನ್ನು ವಾಸಿಮಾಡಿದ್ದು!

... ಕಪೆರ್ನೌಮ ಮತ್ತು ಗಲಿಲಾಯಕ್ಕೆ ಬಂದ ಎಲ್ಲರನ್ನೂ ವಾಸಿಮಾಡಿದ್ದು!

... ಮೈಯೆಲ್ಲಾ ಕುಷ್ಟದಿಂದ ಇದ್ದ ಮನುಷ್ಯನನ್ನು ವಾಸಿಮಾಡಿದ್ದು!

... ಕಪೆರ್ನೌಮಿನಲ್ಲಿ ಮಾಳಿಗೆ ಬಿಚ್ಚಿ ಕೆಳಕ್ಕಿಸಿದ ಮನುಷ್ಯನನ್ನು ವಾಸಿಮಾಡಿದ್ದು!

## ಯೇಸುವಿನ ಅದ್ಭುತಕಾರ್ಯಗಳ ನೈಜತ್ವ

ನಮ್ಮ ಅಧ್ಯಯನದ ಉದ್ಬೋಧಕದಲ್ಲಿ ಯೇಸುವಿನ ಅದ್ಭುತ ಕಾರ್ಯಗಳತ್ತ - ನಿರ್ಧಿಷ್ಟವಾಗಿ ಆತನು ವಾಸಿಮಾಡುವಿಕೆಯತ್ತ ಹತ್ತಿರದ ನೋಟವನ್ನು ಹಾಕೋಣ. ನಮ್ಮ ಓದುವಿಕೆಯಲ್ಲಿ ಈ ಅದ್ಭುತಕಾರ್ಯಗಳನ್ನು ತಿರುಗಿ ತಿರುಗಿ ಭೇಟಿಯಾಗೋಣ.

### ಆಗ ಯೇಸುವಿನ ಅದ್ಭುತಕಾರ್ಯಗಳು

ಈ ದಿನ ನಾವು "ಯೇಸುವಿನ ಅದ್ಭುತಕಾರ್ಯಗಳು" ಎಂಬ ಪದವನ್ನು ಹಗುರವಾಗಿ ಬಳಸುವವರಾಗಿದ್ದೇವೆ: ನಾವು "ಜನನದ ಕುರಿತಾದ ಅದ್ಭುತಕಾರ್ಯ"ದ ಬಗೆಗೆ ಮಾತನಾಡುವವರಾಗಿದ್ದೇವೆ. ನಾವು "ಒಂದು ವೇಳೆ ಆ ಪರೀಕ್ಷೆಯಲ್ಲಿ ಪಾಸಾದರೆ ಅದು ಅದ್ಭುತವೇ ಸರಿ" ಅಥವಾ "ಅಲ್ಸರ್ ಇಲ್ಲದೇ ಈ ವರ್ಷದುದ್ದಕ್ಕೂ ಇದ್ದುದ್ದಾದರೆ ಅದು ಒಂದು ಅದ್ಭುತಕಾರ್ಯವೇ" ಎಂದು ಮಾತನಾಡುತ್ತೇವೆ. ಸತ್ಯವೇದಕ್ಕೆ ಅನುಗುಣವಾಗಿ "ಅದ್ಭುತ ಕಾರ್ಯ" ಎಂಬ ಪದವು ಮಾನವನ ಶ್ರಮದ ಪರಿಣಾಮವಾಗಿರುವಂತದ್ದು ಅಲ್ಲ. ಇದು ಅಲೌಕಿಕವಾದುದ್ದ ಯಾಕೆಂದರೆ ಒಂದು ಕ್ಷಣ ನೈಸರ್ಗಿಕವಾದದ್ದು ಒಂದೆಡೆ ಸರಿಯುತ್ತದೆ ಮತ್ತು ಅಲೌಕಿಕವಾದುದ್ದು ಪ್ರಾಬಲ್ಯಕ್ಕೆ ಬರುತ್ತದೆ. ಆದರೆ ಇದು ಅದಕ್ಕಿಂತ ಹೆಚ್ಚಿನದಾಗಿದೆ. ಅಲೌಕಿಕವಾದದ್ದು ನಿಸರ್ಗದ ಜಗತ್ತಿನಲ್ಲಿ ಕಾರ್ಯಮಾಡುತ್ತಿದೆ ಎಂಬುದು ಅದ್ಭುತಕಾರ್ಯಗಳು ಸಂಭವಿಸಿವೆ ಎಂದು ನೋಡಬಹುದಾದ ಮತ್ತು ಕೇಳ ಬಹುದಾದ ಮತ್ತು ಅರಿತುಕೊಳ್ಳಬಹುದಾದಂಥವುಗಳು ಆಗಿವೆ.

ನಾವು ಮಾತನಾಡುವಂತದ್ದನ್ನು ಪ್ರಾಯೋಗಕ್ಕೆ ತರುವುದರ ಬಗೆಗೆ ಈ ವಾರ ನಾವು ಓದಿದ ಸ್ವಸ್ಥತೆಯ ಬಗೆಗಿನ ಉದಾಹರಣೆಗಳನ್ನು ಬಳಸುವಾ. ಈ ಉದಾಹರಣೆಗಳಲ್ಲಿ ಯೇಸುವಿನ ಸ್ವಸ್ಥತೆಯ ಅನೇಕ ಸತ್ಯಾಂಶಗಳನ್ನು ನಾವು ನೋಡುವವರಾಗಿದ್ದೇವೆ.

ಮೊದಲನೆಯದಾಗಿ, ಯೇಸು ತನ್ನ ಅದ್ಭುತಕಾರ್ಯಗಳಲ್ಲಿ ಮಿತಿಯುಳ್ಳವನಾಗಿರಲಿಲ್ಲ ಎಂಬುದನ್ನು ಗಮನಿಸಿರಿ. ಆತನು "ಆತ್ಮವರವನ್ನು ಅಳತೆಮಾಡದಂತೆ" ಅದನ್ನು (ಯೋಹಾನ 3:34) ಪಡೆದಿದ್ದನು.

ಇತರರ ನಂಬಿಕೆಯ ಮೂಲಕ ಆತನು ಮಿತಿಯುಳ್ಳವನಾಗಿರಲಿಲ್ಲ. ಕೆಲಸಾರಿ ಸ್ವಸ್ಥನಾದ ಮನುಷ್ಯನು, ಕುಷ್ಟರೋಗಿಯ ವಿಚಾರದ ಹಾಗೆ (ಮತ್ತಾಯ 8:2) ನಂಬಿಕೆಯುಳ್ಳವನಾಗಿರುತ್ತಿದ್ದನು. ಕೆಲಸಾರಿ ಸ್ವಸ್ಥನಾದ ಮನುಷ್ಯನು ನಂಬಿಕೆಯುಳ್ಳ ವನಾಗಿದ್ದನು ಎಂಬುದಕ್ಕೆ ಯಾವ ಸೂಚನೆಯೂ ಇರುತ್ತಿರಲಿಲ್ಲ. ಉದಾಹರಣೆಗೆ, ಮಾಳಿಗೆಯನ್ನು ಬಿಚ್ಚಿ ಕೆಳಕ್ಕಿಳಿಸಿದ ಮನುಷ್ಯನ ಸ್ವಸ್ಥತೆಯ ವಿಚಾರದಲ್ಲಿ, ಯೇಸು ಆ ನಾಲ್ಕು ಜನ ಸ್ನೇಹಿತರ ನಂಬಿಕೆಯನ್ನು ನೋಡಿದನು ಹೊರತಾಗಿ ರೋಗಿಯ ನಂಬಿಕೆಯನ್ನಲ್ಲ (ಮತ್ತಾಯ 9:2; ಮಾರ್ಕ 2:5). ಯೇಸು ಮರಣದಿಂದ ಎಬ್ಬಿಸಿದಂತವರು ನಿಶ್ಚಿತವಾಗಿ ಯಾವುದೇ ನಂಬಿಕೆಯ ಮೇಲೆ ಪ್ರಾಯೋಗಿತವಾದ ಆತನು ಮಾಡುವ ಅದ್ಭುತ ಕಾರ್ಯಗಳ ಸಾಮರ್ಥದ ಮೇಲೆ ವಿಶ್ವಾಸವಿಲ್ಲದವರು ಆಗಿದ್ದರು.

ಯೇಸು ತಾನು ಸ್ವಸ್ಥಮಾಡಬಲ್ಲ ದೈಹಿಕ ಸಮಸ್ಯೆಯು ತರದವುಗಳಿಗೆ ಸಂಬಂಧಪಟ್ಟಂತೆ ಮಿತಿಯುಳ್ಳವನಾಗಿರಲಿಲ್ಲ. ಆತನು "ಜನರ *ಎಲ್ಲಾ ತರದ* ರೋಗಗಳನ್ನು *ಎಲ್ಲಾ ತರದ* ಬೇನೆಗಳನ್ನು" ವಾಸಿಮಾಡಿದನು (ಮತ್ತಾಯ 4:23; ಒತ್ತಿ ಹೇಳಿದ್ದು ನನ್ನದು). ಈ ವಾರದ ಅಧ್ಯಯನದಲ್ಲಿ ಆತನು "ಸರಳವಾದ" ಜ್ವರದಂತಹ ಕೆಲವನ್ನು ವಾಸಿಮಾಡಿದನು ಮತ್ತು "ಮೈಯೆಲ್ಲಾ ಕುಷ್ಟದಿಂದ ತುಂಬಿದೆ" (ಲೂಕ 5:12; ಒತ್ತಿ ಹೇಳಿದ್ದು ನನ್ನದು) ಒಬ್ಬನನ್ನು ಸಹ ವಾಸಿಮಾಡಿದನು. ಆತನು ತಾನು ವಾಸಿಮಾಡಬೇಕಾದದ್ದನ್ನು ಎತ್ತಿ ಆರಿಸಿಕೊಂಡು ಮಾಡುತ್ತಿರಲಿಲ್ಲ. ಆತನಲ್ಲಿ ಸ್ವಸ್ಥಮಾಡುವ ಸಹಜವಾದ ಶಕ್ತಿಯು ಇರುವಾಗ, ಯಾರನ್ನು ಆತನು ಸ್ವಸ್ಥಮಾಡಬಾರದು ಎಂಬದಕ್ಕೆ ಅಲ್ಲಿ ಮಿತಿಯು ಇರಲಿಲ್ಲ.

ಹಾಗೂ, ಯಾರು ಸ್ವಸ್ಥವಾಗಬೇಕು ಎಂಬ ಜನರ ಸಂಖ್ಯೆಯ ಬಗೆಗೆ ಯೇಸು ಮಿತಿಯುಳ್ಳವನಾಗಿಯೇ ಇರಲಿಲ್ಲ. ಆತನು ಅವರೆಲ್ಲರನ್ನೂ ಸ್ವಸ್ಥಮಾಡಬಹುದಿತ್ತು. ಆತನು ವಿಫಲತೆಯನ್ನು ಅನುಭವಿಸಲಿಲ್ಲ.

> ಆತನ ಸುದ್ದಿಯು ಸಿರಿಯ ದೇಶದಲ್ಲೆಲ್ಲಾ ಹಬ್ಬಿದ್ದರಿಂದ ಮೈನೆಟ್ಟಗಿಲ್ಲದವರನ್ನೂ ಅಂದರೆ ತರತರದ ರೋಗಬಾದೆಗಳಿಂದ ಕಷ್ಟಪಡುವವರನ್ನೂ ದೆವ್ವಹಿಡಿದವರನ್ನೂ, ಮಾರ್ಚರೋಗಿಗಳನ್ನೂ ಪಾರ್ಶ್ವವಾಯುವಿನವರನ್ನೂ ಆತನ ಬಳಿಗೆ ಕರೆತಂದರು; ಆತನು ಅವರನ್ನು ಸ್ವಸ್ಥಮಾಡಿದನು (ಮತ್ತಾಯ 4:24).

> ಆತನ ... ಮೈಯಲ್ಲಿ ನೆಟ್ಟಗಿಲ್ಲದವರನ್ನು ವಾಸಿಮಾಡಿದನು (ಮತ್ತಾಯ 8:16).

> ... ಯಾರಾರ ಮನೆಯಲ್ಲಿ ತರತರದ ರೋಗಗಳಿಂದ ಅಸ್ವಸ್ಥರಾದವಲಿದ್ದರೋ ಅವರೆಲ್ಲರೂ ಆ ರೋಗಿಗಳನ್ನು ಆತನ ಹತ್ತಿರಕ್ಕೆ ಕರಕೊಂಡು ಬಂದರು; ಆತನು *ಪ್ರತಿಯೊಬ್ಬನ* ಮೇಲೆಯೂ ಕೈಯಿಟ್ಟು ಅವರನ್ನು ವಾಸಿಮಾಡಿದನು (ಲೂಕ 4:40; ಒತ್ತಿ ಹೇಳಿದ್ದು ನನ್ನದು).

ಎರಡನೆಯದಾಗಿ ಯೇಸುವಿನ ಸ್ವಸ್ಥತೆಯು ಒಂದು ವಿಶೇಷ ಲಕ್ಷಣವನ್ನು ಹೊಂದಿದ್ದಾಗಿತ್ತು:

(1) ಸ್ವಸ್ಥತೆಯು *ತಕ್ಷಣ* ಆಗುವುದಾಗಿತ್ತು. ಜನರು ಕ್ರಮೇಣವಾಗಿ ಸ್ವಸ್ಥವಾಗುತ್ತಿರಲಿಲ್ಲ.

ಕುಷ್ಠರೋಗಿಯನ್ನೇ ನಾವು ನೋಡುವಾಗ "ಕೂಡಲೇ ಅವನ ಕುಷ್ಠವು ವಾಸಿಯಾಯಿತು" (ಮತ್ತಾಯ 8:3ಸಿ; ಇದನ್ನು ಸಹ ನೋಡಿರಿ ಮಾರ್ಕ 1:42; ಲೂಕ 5:13). ಪಾರ್ಶ್ವವಾಯು ರೋಗಿಗೆ ಸಂಬಂಧಿಸಿದಂತೆ ಮಾರ್ಕ 2:12, "ಅವನು ಎದ್ದು ಕೂಡಲೇ ತನ್ನ ಹಾಸಿಗೆಯನ್ನು ತೆಗೆದುಕೊಂಡು ಎಲ್ಲರ ಮುಂದೆ ಹೊರಟು ಹೋದನು. ಅದಕ್ಕೆ ಎಲ್ಲರೂ ಬೆರಗಾದರು ..." (ಲೂಕ 5:25, 26) ಎಂದು ಹೇಳುತ್ತದೆ.[3]

(2) ಸ್ವಸ್ಥತೆಯು ಸಂಪೂರ್ಣ ಪ್ರಮಾಣದ್ದಾಗಿರುತ್ತಿತ್ತು. ಜನರು ಅರ್ಧಂಬರ್ಧವಾಗಿ ವಾಸಿ ಯಾಗುತ್ತಿರಲಿಲ್ಲ. ಈ ಉದಾಹರಣೆಯು ಈ ವಾರದ ನಮ್ಮ ಅಧ್ಯಯನದ ವಿವರಣೆಯಲ್ಲಿ ಇದೆ: ಸಭಾಮಂದಿರಲ್ಲಿದ್ದಂಥ ದೆವ್ವ ಹಿಡಿದ ಮನುಷ್ಯನು, ಯೇಸು ಆ ದೆವ್ವವನ್ನು ಬಿಡಿಸಿಬಿಟ್ಟ ಮೇಲೆ ಸಂಪೂರ್ಣವಾಗಿ ಸ್ವಸ್ಥನಾದನು. ಪೇತ್ರನ ಅತ್ತೆಯು, ಯೇಸು ಆಕೆಯನ್ನು ವಾಸಿಮಾಡಿದ ಮೇಲೆ ಸಂಪೂರ್ಣವಾಗಿ ಸ್ವಸ್ಥಳಾದಳು; ಆಕೆಯು ತಕ್ಷಣವೇ ತನ್ನ ದಿನನಿತ್ಯದ ಕಾರ್ಯಗಳಿಗೆ ಹಿಂತಿರುಗಿದಳು. ಕುಷ್ಠರೋಗಿಯು ಕೇವಲ "ಸರಿಯಾಗಲಿಲ್ಲ" ಆತನು ಶುದ್ಧನಾದನು. ದೋಣಿಯಲ್ಲಿದ್ದ ಪಾರ್ಶ್ವವಾಯು ರೋಗಿಯು ತನ್ನ ಹಾಸಿಗೆಯನ್ನು ಎತ್ತಿಕೊಂಡನು ಮತ್ತು ಬಾಗಿಲಿನ ಮೂಲಕ ಹೊರಗೆ ಹೋದನು. ನಮ್ಮ ಅಧ್ಯಯನವು ಮುಂದುವರೆಯುತ್ತಿದ್ದಂತೆ, ನಾವು ಅನೇಕ ಇತರ ಪ್ರಕರಣಗಳನ್ನು ನೋಡುತ್ತೇವೆ: ಕುರುಡನು ನೋಡುವವನಾದನು, ಮುರಿದುಹೋದ ಕೈಕಾಲುಗಳು ಪುನಃ ಸ್ಥಾಪಿಸಲ್ಪಟ್ಟವು, ಜನರು ಮರಣದಿಂದ ಎದ್ದರು.

(3) ಸ್ವಸ್ಥತೆಯು *ಮನದಟ್ಟಾಗುವಂತದ್ದಾಗಿತ್ತು.* ಹಿಂದೆ ನಾನು ಗಮನಿಸಿದಂತೆ ಯೇಸು ಅದ್ಭುತಕಾರ್ಯಗಳನ್ನು ಮಾಡುತ್ತಾನೆ ಎಂದು ಯೇಸುವನ್ನು ಅಲ್ಲಗಳೆಯಲು ಯತ್ನಿಸಿದರು. ಇದರ ಪರಿಣಾಮ ಜನಜಂಗುಳಿಯು ಇನ್ನೂ ಹೆಚ್ಚಿತು ಮತ್ತು ಯೇಸುವಿನ ಜನಪ್ರಿಯತೆಯು ವೃದ್ಧಿಯಾಯಿತು: "ಮತ್ತು ಗಲಿಲಾಯ ದೆಕೊಪೋಲಿಯ ಯೆರೂಸಲೇಮು ಯೂದಾಯ ಎಂಬ ಸ್ಥಳಗಳಿಂದ ಹಾಗೂ ಯೋರ್ದನ್ನಿನ ಆಚೆಕಡೆಯಿಂದ ಜನರು ಗುಂಪುಗುಂಪಾಗಿ ಆತನ ಹಿಂದೆ ಹೋದರು" (ಮತ್ತಾಯ 4:24, 25). ಯೇಸು ಸಭಾಮಂದಿರದಲ್ಲಿ ದೆವ್ವ ಪೀಡಿತನನ್ನು ವಾಸಿಮಾಡಿದ ಮೇಲೆ ನಾವು ಹೀಗೆ ಓದುತ್ತೇವೆ,

> ಅದಕ್ಕೆ ಎಲ್ಲರೂ ಬೆರಗಾಗಿ ಇದೇನಿರಬಹುದು? ಇದು ಹೊಸ ಉಪದೇಶ. ಈತನು ಅಧಿಕಾರದಿಂದ ದೆವ್ವಗಳಿಗೂ ಅಪ್ಪಣೆಕೊಡುತ್ತಾನೆ; ಅವು ಆತನ ಮಾತನ್ನು ಕೇಳುತ್ತವೆ ಎಂದು ತಮ್ಮ ತಮ್ಮೊಳಗೆ ವಿಚಾರಮಾಡಿಕೊಂಡರು. ಕೂಡಲೇ ಆತನ ಸುದ್ಧಿಯು ಗಲಿಲಾಯ ಸೀಮೆಯಲ್ಲಿ ಎಲ್ಲೆಲ್ಲಿಯೂ ಹಬ್ಬಿತು (ಮಾರ್ಕ 1:27, 28).

ಆತನು ಕುಷ್ಠರೋಗಿಯನ್ನು ವಾಸಿಮಾಡಿದ ನಂತರ, "ಆತನ ಸುದ್ಧಿಯು ಮತ್ತಷ್ಟು ಹಬ್ಬಿತು; ಮತ್ತು ಜನರು ಆತನ ಉಪದೇಶವನ್ನು ಕೇಳುವುದಕ್ಕೂ ತಮ್ಮ ತಮ್ಮ ಜಾಡ್ಯಗಳನ್ನು ವಾಸಿ ಮಾಡಿಸಿಕೊಳ್ಳುವುದಕ್ಕೂ ಗುಂಪುಗುಂಪಾಗಿ ನೆರೆದರು" (ಲೂಕ 5:15). ಈ ವಾರದ ಅಧ್ಯಯನದ ಮಾಳಿಗೆಯನ್ನು ಬಿಚ್ಚಿ ಕೆಳಕ್ಕೆ ಇಳಿಸಿದ ಮನುಷ್ಯನ ಸ್ವಸ್ಥತೆಯ ಪ್ರಕರಣವು ಒಳ್ಳೆಯ ಉದಾಹರಣೆಯಾಗಬಹುದು. ಆ ಸಂದರ್ಭದಲ್ಲಿ ಅದ್ಭುತಕಾರ್ಯವು ನಡೆಯಿತು ಎಂಬುದನ್ನು ಯೇಸುವಿನ ವೈರಿಗಳೂ ಕೂಡಾ ನಿರಾಕರಿಸಲಾರರು.

ಯೇಸುವಿನ ಅದ್ಭುತಕಾರ್ಯಗಳ ಇತರ ಸಂಗತಿಗಳೂ ಕೂಡಾ ಗಮನಿಸಲ್ಪಟ್ಟವುಗಳು ಆಗಿದ್ದು ಅದರಲ್ಲಿ ಇನ್ನೊಂದನ್ನು ವಿವರಿಸೋಣ: ಮೂರನೆಯದಾಗಿ ಯೇಸುವಿನ ಗುರಿಯು ಮೂಲತಹವಾಗಿ ಆತ್ಮೀಕವಾದದ್ದಾಗಿತ್ತು. ತನ್ನ ಉದ್ದೇಶವು ಆತ್ಮಗಳನ್ನು ರಕ್ಷಿಸುವದು ಆಗಿತ್ತು, ಹೊರತಾಗಿ ಕೇವಲ ತೊಂದರೆಯಿಂದ ಬಿಡುಗಡೆ ಅಲ್ಲ. ಈ ವಾರದಲ್ಲಿ ನೀನು ಓದುತ್ತಿರುವಂತೆ ಲೂಕ 4:43ನ್ನು ಗಮನಿಸಿದೆಯಾ? ಆ ವಚನವು ಹೀಗೆ ಹೇಳುತ್ತದೆ, "ಆದರೆ ಆತನು ಅವರಿಗೆ ನಾನು ದೇವರ ರಾಜ್ಯದ ಸುವಾರ್ತೆಯನ್ನು ಬೇರೆ ಊರುಗಳಿಗೂ ಸಾರಿ ಹೇಳಬೇಕಾಗಿದೆ; *ಉದ್ದೇಶಕ್ಕಾಗಿಯೇ* ಕಳಿಸಲ್ಪಟ್ಟಿದ್ದೇನೆ ಎಂದು ಹೇಳಿದನು" (ಒತ್ತಿ ಹೇಳಿದ್ದು ನನ್ನದು).

ಆತನು ಸ್ವಸ್ಥಮಾಡುವುದಕ್ಕಾಗಿ ಕಳಿಸಲ್ಪಟ್ಟಿದ್ದಾನೆ ಎಂದು ಆತನು ಹೇಳಲಿಲ್ಲ, ಬದಲಾಗಿ ಸುವಾರ್ತೆಯನ್ನು ಬೋಧಿಸುವುದಕ್ಕಾಗಿ ಅದರ ಮೂಲಕ ಜನರು ರಕ್ಷಿಸಲ್ಪಡುವುಕ್ಕಾಗಿ ಆತನು ಕಳಿಸಲ್ಪಟ್ಟಿದ್ದಾನೆ (ನೋಡಿರಿ ಲೂಕ 19:10).

ಯೇಸು ಮಾನವನ ಕಷ್ಟಗಳಿಗೆ ಸ್ಪಂದಿಸಲಿಲ್ಲ ಎಂದು ಇದರ ಅರ್ಥವಲ್ಲ. ಕುಷ್ಟರೋಗಿಯನ್ನು ಆತನು ಕಂಡಾಗ, "ಆತನು ಕನಿಕರಪಟ್ಟನು" (ಮಾರ್ಕ 1:41). ಇದರ ಅರ್ಥ ಯೇಸುವಿನ ಪ್ರಥಮ ಆಧ್ಯತೆಯು ಸ್ವಸ್ಥಮಾಡುವಿಕೆಯು ಅಲ್ಲ ಅಥವಾ ಇತರ ಅದ್ಭುತ ಕಾರ್ಯಗಳನ್ನು ನಡೆಸುವದು ಅಲ್ಲ. ಆತನು ಮಾನವರ ಆತ್ಮಗಳ ಬಗೆಗೆ ಬಲು ಕಾಳಜಿಯುಳ್ಳವನಾಗಿದ್ದನು, ಹೊರತು ಅವರ ದೇಹದ ಬಗೆಗೆ ಅಲ್ಲ. ಮಾಳಿಗೆಯಿಂದ ಆ ಮನುಷ್ಯನು ಕೆಳಕ್ಕಿಳಿಸಲ್ಪಟ್ಟಾಗ ಯೇಸು ಮಾಡಿದ ಮೊದಲ ಕೆಲಸ ಆತನ ಪಾಪಗಳನ್ನು ಕ್ಷಮಿಸಿದ್ದು (ಮಾರ್ಕ 2:5).

**ಇಂದು ಅದ್ಭುತ ಕಾರ್ಯ ಎಂದು ಹೇಳಿಕೊಳ್ಳುವವುಗಳು ಅದ್ಭುತ ಕಾರ್ಯ**

ಕೆಲ ವ್ಯತ್ಯಾಸಗಳನ್ನು ಚರ್ಚೆಮಾಡದ ಹೊರತು ನಾನು ಈ ಭಾಗವನ್ನು ಬಿಡಲಾರೆನು. ಜನರು ಯೇಸುವಿನ ಅದ್ಭುತಕಾರ್ಯಗಳನ್ನು ನಂಬದೆ ಇರುವುದಕ್ಕೆ ಒಂದು ಕಾರಣ ಎಂದರೆ ಇಂದು ಪ್ರತಿಪಾದಿಸುವ ಕೆಲವು ಯೇಸು ಮತ್ತು ಅಪೊಸ್ತಲರು ಮಾಡಿದಂತಹ ಶಕ್ತಿಯಿಂದಲೆ ತಾವೂ ಮಾಡುವವರು ಎಂದು ಪ್ರತಿಪಾದಿಸುವವರಾಗಿರುತ್ತಾರೆ. ಈ ದುರುಳರು ಏನು ಮಾಡುತ್ತಿದ್ದಾರೆ ಎಂದು ಶಾಸ್ತ್ರಿಗಳು ಪರೀಕ್ಷೆ ಮಾಡುತ್ತಿದ್ದರು ಹಾಗೂ ಯೇಸು ಮಾಡಿದ್ದು ಅದ್ಭುತಕಾರ್ಯಗಳಲ್ಲ ಎಂದು ಪರಿಗಣಿಸಿ ಯೇಸು ಮತ್ತು ಅಪೊಸ್ತಲರು ಅದ್ಭುತಕಾರ್ಯದಲ್ಲಿ ಯಾವುದೇ ಒಂದನ್ನು ಮಾಡುತ್ತಿದ್ದಾರೆ ಎಂಬ ನಿರ್ಣಯಕ್ಕೆ ಬಂದರು. ಹೇಗೋ ಈಗಿನ ಅದ್ಭುತ ಕಾರ್ಯಗಳು ಎಂದು ಕರೆಯಲ್ಪಡುವವುಗಳು ಮತ್ತು ಯೇಸುವಿನ ಅದ್ಭುತ ಕಾರ್ಯಗಳಲ್ಲಿ ಕೆಲ ಭಿನ್ನತೆಗಳು ಇರುವುದನ್ನು ನಾವು ಗಮನಿಸುವಾ.

ನಾವು ನೋಡಿದಂತೆ ಯೇಸು ಅದ್ಭುತ ಕಾರ್ಯಗಳಲ್ಲಿ ಮಿತಿಯನ್ನು ಹೊಂದಿರಲಿಲ್ಲ-ಅವು ಇತರರ ನಂಬಿಕೆಯ ಮೇಲೆ ಅವಲಂಭಿಸಿಲಿಲ್ಲ, ಯಾವುದೇ ತರದ ಬಾಹ್ಯ ಸಮಸ್ಯೆಗಳಿಂದಲ್ಲ, ಪ್ರಕರಣಗಳ ಸಂಖ್ಯೆಯಿಂದಲ್ಲ. ಇದಕ್ಕೆ ವ್ಯತ್ಯಾಸವಾಗಿ ಇಂದಿನ ಜನರು ಮತ್ತೊಬ್ಬರನ್ನು ಸ್ವಸ್ಥಮಾಡದೇ ಹೋದಾಗ ಅವರು ಹಲವುಬಾರಿ ಹೇಳುವದು, "ಆತನಿಗೆ ಸಾಕಷ್ಟು ನಂಬಿಕೆಯಿರಲಿಲ್ಲ." ಅದಕ್ಕೆ ಪ್ರತಿಯಾಗಿ ಅವರು ಹೇಳುವುದೇನೆಂದರೆ ಇತರ ಮನುಷ್ಯರ ನಂಬಿಕೆ ಮೂಲಕ ನಾವು ಮಿತಿಯುಳ್ಳವರಾಗಿದ್ದೇವೆ. ಅಂದರೆ ಇಂದಿನ ಸ್ವಸ್ಥತೆ ಮಾಡುವವರು ಅದನ್ನು ಸ್ವಸ್ಥಮಾಡುವದಕ್ಕೆ ಪ್ರಯತ್ನಿಸುವುದಿಲ್ಲ. ಯಾವುದೇ ಸಮಯದಲ್ಲಿ ಅವರು "ಸ್ವಸ್ಥತಾ ಕೂಟವನ್ನು" ನಡೆಸುವರು, ಜನರು ಸ್ವಸ್ಥತೆ ಪಡಕೊಳ್ಳದೆ ಮನೆಗೆ ಹೋಗುತ್ತಿದ್ದರು.

ವಿಶೇಷವಾಗಿ ಯೇಸುವಿನ ಅದ್ಭುತಕಾರ್ಯಗಳ ಲಕ್ಷಣಗಳ ಬಗೆಗೆ ನಾವು ವ್ಯತ್ಯಾಸವನ್ನು ನೋಡೋಣ: ಯೇಸುವಿನ ಅದ್ಭುತ ಕಾರ್ಯಗಳು ಮೊದಲನೆಯದು *ತಕ್ಷಣ* ಆಗುವಂತವುಗಳು ಮತ್ತು ಎರಡನೆಯದು *ಸಂಪೂರ್ಣವಾಗಿ* ಆಗುವಂತವುಗಳು. ಸ್ವಸ್ಥಮಾಡುವವರು ಎಂದು ಹೇಳಿಕೊಳ್ಳುವವರು ಹಲವು ಬಾರಿ ಒಬ್ಬನು "ಸ್ವಸ್ಥನಾದನು" ಎಂದು ಬರುಬರುತ್ತಾ ಕ್ರಮೇಣವಾಗಿ ಆತನು ಸ್ವಸ್ಥನಾಗುತ್ತಾನೆ. ಒಂದು "ಸ್ವಸ್ಥತಾ ಕೂಟಕ್ಕೆ" ನೀನು ಹೋಗಿ ದ್ದಾದರೆ. ಕೈಕಾಲು ಮುರುಟಿದವನ ಸ್ವಸ್ಥನಾದದ್ದನ್ನು ಅಲ್ಲಿ ನೀನು ಕಾಣುವುದಿಲ್ಲ; ಸತ್ತವನ್ನು ಎದ್ದದ್ದನ್ನು ನೀನು ನೋಡುವುದಿಲ್ಲ. ಮೂರನೆಯ ಲಕ್ಷಣ ಇನ್ನೂ ಗಂಡಾತರಕಾರಿಯಾದುದ್ದು ಆಗಿದ್ದು ಯೇಸು ಮಾಡಿದಂತಹ ಅದ್ಭುತಕಾರ್ಯಗಳನ್ನೇ ನಾವು ಮಾಡುತ್ತೇವೆ ಎಂದು ಪ್ರತಿಪಾದಿಸುವುದಾಗಿದೆ. ಯೇಸುವಿನ ಅದ್ಭುತ ಕಾರ್ಯಗಳು ಮನದಟ್ಟಾಗುವಂತವುಗಳು ಆಗಿದ್ದವು: ಯೇಸುವಿನ ಅದ್ಭುತ ಕಾರ್ಯಗಳು ಆತನ ವೈರಿಗಳು ಕೂಡಾ ಒಪ್ಪುವಂತವು; ಅವುಗಳು ಶಾಸ್ತ್ರಿಗಳನ್ನು ಒಪ್ಪಿಸುವಂತಿದ್ದವು; ಅದ್ಭುತ ಕಾರ್ಯಗಳು ನಡೆದವು ಎಂಬುದನ್ನು

ಯಾರೊಬ್ಬರೂ ಅಲ್ಲಗಳೆಲು ಸಾಧ್ಯವೇ ಇಲ್ಲ. ಒಂದು "ಸ್ವಸ್ಥತಾ ಕೂಟ"ದಲ್ಲಿ ನಾನಿದ್ದೆನು ಮತ್ತು ಅದಕ್ಕಿಂತ ಹೆಚ್ಚಿನವಗಳನ್ನು ನಾನು ಟೆಲಿವಿಶ್‌ನಲ್ಲಿ ನೋಡಿದ್ದೇನೆ, ಆದರೆ ನಾನು ಇಂದಿಗೂ ಒಂದು ಅಧ್ಭುತ ಕಾರ್ಯವನ್ನಾದರೂ ನೋಡಿಲ್ಲ. ಅದ್ಭುತ ಕಾರ್ಯಗಳು ಇಂದು ಸಂಭವಿಸುತ್ತವೆ ಎಂಬುದನ್ನು ನಿರಾಕರಿಸುವದು ಕಷ್ಟವೇನಲ್ಲ.

ಅಂತಿಮವಾಗಿ, ವ್ಯತ್ಯಾಸವು ಅಲ್ಲಿ ಒತ್ತಿ ಹೇಳಲ್ಪಟ್ಟಿದೆ; ಯೇಸು ಎಂದಿಗೂ ಬಾಹ್ಯ ವಾದದ್ದಕ್ಕೆ ಅಂದರೆ ಕಷ್ಟದಿಂದ ಮುಕ್ತಿಯನ್ನು ಹೊಂದುವುದಕ್ಕೆ ಒತ್ತುಕೊಟ್ಟಿರಲಿಲ್ಲ. ಅದಲ್ಲದೆ ಆತನು ಆತ್ಮೀಕ ಪರಿವರ್ತನೆಗೆ ಒತ್ತುಕೊಟ್ಟಿದ್ದನು. "ಸ್ವಸ್ಥತಾ ಕೂಟ"ದಲ್ಲಿ ಒತ್ತುಕೊಡುವುದಕ್ಕೆ ಮತ್ತು ಕುತೂಹಲವು ಬಾಹ್ಯವಾದ ಸಂಗತಿಗಳ ಮೇಲೆ ಕೇಂದ್ರವಾಗಿರುವುದನ್ನು ನಾನು ನೋಡಿದ್ದೇನೆ. ಇಂದು ನಡೆಯುವ ಅದ್ಭುತಕಾರ್ಯವನ್ನಾದರೂ ನೋಡಿಲ್ಲ. ಅದ್ಭುತ ಕಾರ್ಯಗಳು ಇಂದೂ ಸಂಭವಿಸುತ್ತವೆ ಎಂಬುದನ್ನು ನಿರಾಕರಿಸುವದು ಕಷ್ಟವೇನಲ್ಲ.

ಇಂದು ನಡೆಯುವ ಅದ್ಭುತಕಾರ್ಯಗಳನ್ನು ನೋಡಿದಾಗ ಅಂದು ಯೇಸು ಮಾಡಿದ ಅದ್ಭುತಕಾರ್ಯಗಳನ್ನು ಮಾಡಿದನು ಎಂದು ಮನವರಿಕೆ ಮಾಡುವದು ಅಸಾಧ್ಯವಾದದ್ದು ಆಗಿದೆ. ಈ ವಿಷಯದಲ್ಲಿ ಅಪರಾಧಿ ಎನಿಸಿಕೊಂಡವರು ಒಂದು ದಿನ ಲೆಕ್ಕಕೊಡಬೇಕಾಗಿ ಬರುತ್ತದೆ.

## ಯೇಸುವಿನ ಅದ್ಭುತಕಾರ್ಯಗಳ ಪರಿಣಾಣಾಮ

ಇಲ್ಲಿಯವರೆಗೆ ಚರ್ಚಿಸಿದ ಮುಕ್ತಾಯದ ಪ್ರಸ್ತಾಪ ಆತುಕೊಂಡಿದೆ. ನಾನು ಈ ವಿಚಾರದೊಡನೆ ಮುಗಿಸಬೇಕೆಂದು ಬಯಸುವವನಾಗಿದ್ದೇನೆ, ಯಾಕೆಂದರೆ ಇದು ಯೇಸುವಿನ ಅದ್ಭುತಕಾರ್ಯವಾಗಿದೆ ಅದು ಸ್ವಸ್ಥಮಾಡಿದ್ದು, ಬಿರುಗಾಳಿ ನಿಲ್ಲಿಸಿದ್ದು, ಅಥವಾ ಸತ್ತವರೊಳಗಿಂದ ಎಬ್ಬಿಸಿದ್ದು ಎಲ್ಲವನ್ನು ಒಳಗೊಂಡದ್ದು ಅವೆಲ್ಲವುಗಳು: ಯೇಸು ಕ್ರಿಸ್ತನು ದೇವರ ಮಗನು ಮತ್ತು ಆತನು ರಕ್ಷಕ ಎಂದು ಸಾಧಿಸುವವುಗಳು ಆಗಿವೆ.

ಯೇಸುವಿನ ಅದ್ಭುತಕಾರ್ಯಗಳು, ನೋಡಿದವರ ಮೇಲೆ ಬಲಯುತವಾದ ಪ್ರಭಾವವನ್ನು ಬೀರಿದ್ದವು. ಇದು ಮಾಳಿಗೆಯನ್ನು ಬಿಚ್ಚಿ ಕೆಳಕ್ಕೆ ಕಳಿಸಲ್ಪಟ್ಟ ಮನುಷ್ಯನ ವಿಚಾರದಲ್ಲಿ ದೃಷ್ಟಾಂತಿಕರಿಸಲ್ಪಟ್ಟಿದೆ. ಎಲ್ಲಾ ಈ ಮೂರು ವಿವರಗಳನ್ನು ಒಂದೆಡೆ ಇಟ್ಟಾಗ ಅಲ್ಲಿದ್ದವರನ್ನು ಆ ಅದ್ಭುತ ಕಾರ್ಯಗಳು ಎಷ್ಟರಮಟ್ಟಿಗೆ ಪ್ರಭಾವಿತಗೊಳಿಸಿದವು ಎಂಬುದನ್ನು ನೀವು ನೋಡಬಹುದಾಗಿದೆ:

- ಅವರು ಅತ್ಯಾಶ್ಚರ್ಯಪಟ್ಟರು (ಮಾರ್ಕ 2:12).
- ಅವರು ಭಯದಿಂದ ತುಂಬಿದವರಾದರು (ಲೂಕ 5:26).
- ಅವರು ಭಯಪಟ್ಟರು (ಮತ್ತಾಯ 9:8).
- ದೇವರನ್ನು ಕೊಂಡಾಡಿದರು (ಮತ್ತಾಯ 9:8; ಮಾರ್ಕ 2:12; ಲೂಕ 5:25, 26).

ಆತನು ನಿಜವಾಗಿಯೂ ದೇವರ ಮಗನು ಎಂದು ಜನರು ಅರಿತುಕೊಳ್ಳುವದು ಆತನ ಅದ್ಭುತಕಾರ್ಯಗಳ ಮೂಲ ಉದ್ದೇಶವಾಗಿತ್ತು ಎಂದು ಯೇಸು ಒತ್ತಿ ಹೇಳಿದನು. ಉದಾಹರಣೆಗಾಗಿ, ಪಾಪವನ್ನು ಕ್ಷಮಿಸುವ (ದೇವರು ಮಾತ್ರ ಮಾಡುವಂತಹ) ಅಧಿಕಾರವನ್ನು ಆತನು ಹೊಂದಿದ್ದನು ಎಂದು ಆತನು ಸಾಧಿಸಿದನು, ಮಾಳಿಗೆಯನ್ನು ಬಿಚ್ಚಿ ಕೆಳಕ್ಕಿಳಿಸಿದ ಪಾರ್ಶ್ವವಾಯುರೋಗಿಯನ್ನು ಆತನು ಸ್ವಸ್ಥಮಾಡಿದನು (ಮತ್ತಾಯ 9:4-6). ನಮ್ಮ ಅಧ್ಯಯನವು ಮುಂದುವರೆಯುತ್ತಿದ್ದಂತೆ ಆ ಸತ್ಯವು ಮತ್ತೇ ಮತ್ತೇ ದೃಷ್ಟಾಂತೀಕರಿಸುವುದಾಗಿದೆ. ಯೇಸು ಮೆಸ್ಸೀಯನು ಹೌದೋ ಅಲ್ಲವೋ ಎಂದು ಸ್ನಾನಿಕನಾದ ಯೋಹಾನನು ಆಶ್ಚರ್ಯಪಟ್ಟಾಗ ಅದಕ್ಕೆ "ಹೌದು" ಎಂದು ಹೇಳುವುದರ

ಬದಲು ಯೇಸು ಅನೇಕ ಜನರನ್ನು, ವಾಸಿಮಾಡಿದನು. ಅದಕ್ಕೆ ಪ್ರತಿಯಾಗಿ ಆತನು "ನೀವು ಕಂಡು ಕೇಳಿದವುಗಳನ್ನು ಯೋಹಾನನಿಗೆ ಹೇಳಿರಿ" ಎಂದು ಹೇಳಿದನು (ನೋಡಿರಿ ಲೂಕ 7:20-23).

ವಿಶೇಷವಾಗಿ ಯೋಹಾನನು ಸತ್ಯಾಂಶವನ್ನು ಒತ್ತಿ ಹೇಳಿದ್ದಾನೆ. ಯೋಹಾನ 2:11ರಲ್ಲಿ, ಶಿಷ್ಯರ ನಂಬಿಕೆಯನ್ನು ಆತನಲ್ಲಿ ಬಲಪಡಿಸಲು ಮೊದಲನೆಯ ಸೂಚಕಕಾರ್ಯವನ್ನು ಯೇಸು ಮಾಡಿದನು. ಯೋಹಾನ 5:36ರಲ್ಲಿ,

"ನಾನು ಮಾಡುವ ಕೆಲಸಗಳೇ, ತಂದೆಯು ನನ್ನನ್ನು ಕಳುಹಿಸಿಕೊಟ್ಟನೆಂಬುದಾಗಿ ನನ್ನ ವಿಷಯದಲ್ಲಿ ಸಾಕ್ಷಿಕೊಡುತ್ತದೆ" ಎಂದು ಕ್ರಿಸ್ತನು ಹೇಳಿದ್ದಾನೆ. ಯೇಸು "ಕ್ರಿಯೆಗಳನ್ನು ನೋಡಿ ನನ್ನ ಮಾತನ್ನು ನಂಬಿರಿ" ಎಂದು ತನ್ನ ಶಿಷ್ಯರಿಗೆ ಸವಾಲನ್ನು ಎಸೆದನು (ಯೋಹಾನ 14:11). "ನಾನು ಯೇಸುವಿನ ಅದ್ಭುತ ಕಾರ್ಯಗಳನ್ನು ನೋಡಿದ್ದಾದರೆ, ನಾನು ನಂಬಬಹುದಾಗಿದೆ" ಎಂದು ನೀವು ಹೇಳಬಹುದು. ಯೋಹಾನನು ಈ ರೀತಿಯಾಗಿಯೂ ಅದನ್ನು ಕೂಡಾ ಒಳಪಡಿಸಿಕೊಂಡಿದ್ದಾನೆ.

> ಯೇಸು ಇನ್ನು ಬೇರೆ ಎಷ್ಟೋ ಸೂಚಕಕಾರ್ಯಗಳನ್ನು ತನ್ನ ಶಿಷ್ಯರ ಮುಂದೆ ಮಾಡಿದನು. ಅವುಗಳು ಈ ಗ್ರಂಥದಲ್ಲಿ *ಬರೆದಿರುವುದಿಲ್ಲ.* ಆದರೆ ಯೇಸು ದೇವಕುಮಾರನಾದ ಕ್ರಿಸ್ತನೆಂದು ನಂಬುವಂತೆಯೂ ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದದೆ (ಯೋಹಾನ 20:30, 31; ಒತ್ತಿ ಹೇಳಿದ್ದು ನನ್ನದು).

ಕ್ರಿಸ್ತನ ಅದ್ಭುತ ಕಾರ್ಯಗಳು ಪುನರಾವರ್ತನೆಯಾಗಿಲ್ಲ. ಅದನ್ನು ಕೈ ಕೊಳ್ಳುವವರಿಗೆ ನಾವು ಖಚಿತವಾದ ಸಾಕ್ಷಿಯಾಗಿದ್ದೇವೆ. ನಾವು ಅವರ ಸಾಕ್ಷಿಯನ್ನು ನಂಬದೇ ಹೋದರೆ ನಾವು ಸ್ವಂತ ಕಣ್ಣಾರೆ ನೋಡಿದರೂ ಕೂಡಾ ನಾವು ನಂಬುವುದಿಲ್ಲ (ನೋಡಿರಿ ಲೂಕ 16:31).

## ಮುಕ್ತಾಯ

ಯೇಸುವಿನ ಅದ್ಭುತ ಕಾರ್ಯಗಳು ಮಹತ್ವದ ಪಾಠವನ್ನು ಕಲಿಸಿವೆ. ಉದಾಹರಣೆಗೆ ಯೇಸು ಇತರರ ಸಮಸ್ಯೆಗಳ ಬಗೆಗೆ ಕಾಳಜಿಯುಳ್ಳವನಾಗಿದ್ದನು ಎಂದು ಅವು ಪ್ರಾಯೋಗಿಕ ವಾಗಿವೆ. ನಾವು ಯಾವದೇ ತರದ ಸಮಸ್ಯೆಯಲ್ಲಿರುವಾಗಲೂ ಯೇಸು ನಮ್ಮ ಬಗ್ಗೆ ಇನ್ನೂ ಅನುಕಂಪವುಳ್ಳವನಾಗಿದ್ದಾನೆ. ಬಲು ಮುಖ್ಯವಾದದೆಂದರೆ, ಯೇಸು ನಿಜವಾಗಿಯೂ ದೇವಕುಮಾರನು ಎಂದು ಅದ್ಭುತಕಾರ್ಯಗಳು ಬೋಧಿಸುವವುಗಳು ಆಗಿವೆ. ಅದರ ಮೂಲಕ ನಾವು ನಮ್ಮ ಪಾಪಗಳಿಗೆ ಪರಿಹಾರವನ್ನು ಹೊಂದಬಹುದು ಮತ್ತು ಒಂದು ದಿನ ಆತನೊಡನೆ ನಿತ್ಯತ್ವದವರೆಗೂ ಹೋಗಿರಬಹುದು!

ಯೇಸು ದೇವರ ಮಗ ಎಂದು ನೀನು *ನಂಬುತ್ತೀಯಾ?* ಯೇಸು ನನ್ನ ಪಾಪಗಳಿಗಾಗಿ ಸತ್ತನು ಎಂದು ನಂಬುತ್ತೀಯಾ (1 ಕೊರಿಂಥ 15:3)? ಈ ನಂಬಿಕೆಯು ನಿನ್ನ ಹೃದಯದಲ್ಲಿ ಪಶ್ಚಾತ್ತಾಪವನ್ನು ಹುಟ್ಟಿಸಬಹುದದೇ (ಅಪೊಸ್ತಲರ ಕೃತ್ಯಗಳು 17:30)? ನಿನ್ನ ನಂಬಿಕೆಯನ್ನು ಅರಿಕೆ ಮಾಡಿ ಯೇಸುವಿನಲ್ಲಿ ದೀಕ್ಷಾಸ್ನಾನ ಪಡೆಯುವಿಯಾ (ರೋಮಾಪುರ 10:9, 10; ಗಲಾತ್ಯ 3:26, 27)? ನೀನು ನಿಜವಾಗಿ ಯೇಸುವನ್ನು ನಂಬುವುದಾದರೆ ನಿನ್ನ ನಂಬಿಕೆಯನ್ನು ಇಂದೆಯೇ ಪ್ರಕಟಿಸು.

---

ಟಿಪ್ಪಣೆಗಳು

[1]ವಾರದ ಅಧ್ಯಯನಕ್ಕಾಗಿ ಮತ್ತಾಯನ ಕರೆಯನ್ನು ಹೊರತುಪಡಿಸಿ ಉಳಿದ ಎಲ್ಲವುಗ ಳನ್ನು ಈ ಸಮೀಕ್ಷೆಯು ಒಳಗೊಂಡಿದೆ. [2]Abilene Christian University (then Abilene Christian College) in Abilene, Texas. [3]ನಾವು ಓದಿದ ಇತರ ಪ್ರಕರಣಗಳಲ್ಲಿಯೂ ತಕ್ಷಣ ಸ್ವಸ್ಥವಾಗುವಿಕೆಯು ಸೂಚಸಲ್ಪಟ್ಟಿದೆ.